# <u>ಸಿವಿಲ್ ಜಡ್ಜ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಮುಂಡಗೋಡ.</u>

## <u>ಕ್ರಿಮಿನಲ್ ಮೊಕದ್ದಮೆ ಸಂಖ್ಯೆ :429/2025</u>

**ಫಿರ್ಯಾದುದಾರರು**

ಶ್ರೀ ಬಸವೇಶ್ವರ ಕೋ-ಆಫ್‌ಕ್ರೇಡಿಟ್ ಸೊಸೈಟಿ ಲಿ.
ಮೈನಳ್ಳಿ, ತಾಃಮುಂಡಗೋಡ ನಿಷ್ಪತ್- ಇದರ ಹಿರಿಯ ಗುಮಾಸ್ತ
ಶ್ರೀ ವೆಂಕಟೇಶ ತಂದೆ ಮಂಜುನಾಥ ಓಂಕಾರ,
ವರ್ಷ: 26 ವರ್ಷ, ಸಾ: ಹಳೂಓಣಿ-ಮುಂಡಗೋಡ,
ತಾ: ಮುಂಡಗೋಡ.

**- ವಿರುದ್ಧ -**

**ಆರೋಪಿತರು**

ಶ್ರೀಮತಿ ನಿರ್ಮಲಾ ಚನ್ನಪ್ಪ ಚಲವಾದಿ,
ಸಾ: ಸಿದ್ದಾಪುರ-ಮಳಗಿ, ಪೋ-ಮಳಗಿ,
ತಾ: ಮುಂಡಗೋಡ, ಜಿ: ಉತ್ತರ ಕನ್ನಡ.

**<u>ಆಪಾದನೆ.</u>**

ಆರೋಪಿತರಾದ ನೀವು ಫಿರ್ಯಾಧಿದಾರರ ಸಹಕಾರಿ ಸೊಸೈಟಿಯಲ್ಲಿ ವೈಯಕ್ತಿಕ ಸಾಲವನ್ನು ದಿನಾಂಕಃ 02-12-2023 ರಂದು ರೂ.36,000-00 ಗಳನ್ನು ಸಾಲದ ಖಾತೆ ಸಂಖ್ಯೆ 428 ರಲ್ಲಿ ಪಡೆದಿರುತ್ತೀರಿ, ಅಲ್ಲದೆ ಸಂಘದ ನೀತಿ ನಿಯಮಾವಳಿಗಳ ಪ್ರಕಾರ ಜಾಮೀನು ಭದ್ರತೆಯನ್ನು ನೀಡಿದ್ದಲ್ಲದೇ, ಕರಾರು ಒಡಂಬಡಿಕೆಯನ್ನು ಸಂಘಕ್ಕೆ ಬರೆದುಕೊಟ್ಟಿರುತ್ತೀರಿ. ತದನಂತರ ಸದರಿ ಸಾಲದ ಮರುಪಾವತಿ ಮಾಡಿವ ಅವಧಿ ಮೂಗಿದರೂ ಕೂಡ ತಾವು ನಿಗಧಿತ ಸಮಯಕ್ಕೆ ಸಾಲವನ್ನು ಮರು ಪಾವತಿ ಮಾಡದೇ, ಕಾಲಹರಣವನ್ನು ಮಾಡಿ ಸಮಯವನ್ನು ದೂರುತ್ತಾ ಬಂದಿರುತ್ತೀರಿ, ಕೊನೆಗೆ ನೀವು ಪಡೆದ ಸಾಲವನ್ನು ಮರು ಪಾವತಿ ಮಾಡಲು ಪಿರ್ಯಾದಿ ಸಂಘದವರು 2025 ರ ಜನವರಿ 2 ನೇ ವಾರದಲ್ಲಿ ಕೇಳಿಕೊಂಡಾಗ, ಸದರಿ ಸಾಲವನ್ನು ಮರುಪಾವತಿ ಮಾಡುವುದಾಗಿ ಒಪ್ಪಿ ಸ್ಟೇಟ್ ಬ್ಯಾಂಕ ಆಫ್ ಇಂಡಿಯಾ ಶಾಖೆಃ ಮಳಗಿಯಲ್ಲಿ ನೀವು ಹೊಂದಿರುವ ಖಾತೆಯ ಚೆಕ್ ನಂ.012246, ಒಟ್ಟು ಅಲು ಬಡ್ಡಿ ಸೇರಿ ರೂ.41,407/- ಮೊತ್ತಕ್ಕೆ ದಿನಾಂಕಃ 03-03-2025 ರಂದು ಪೋಸ್ಟ್‌ಡೇಟೆಡ್ ಚೆಕನ್ನು ನೀಡಿರುತ್ತೀರಿ, ತದನಂತರ ತಮ್ಮ ಭರವಸೆಯ ಮೇರೆಗೆ ಫಿರ್ಯಾದಿದಾರರ ಸಂಘವು ದಿನಾಂಕ 03-03-2025 ರಂದು ನಗಧೀಕರಣಕ್ಕಾಗಿ ಅವರ ಖಾತೆ ಇರುವ ಸ್ಟೇಟ್ ಬ್ಯಾಂಕ ಆಫ್ ಇಂಡಿಯಾ ಶಾಖೆಃ ಮಳಗಿಗೆ ಸದರಿ ಚೆಕನ್ನು ಹಾಜರಪಡಿಸಿದಾಗ, ನಿಮ್ಮ ಖಾತೆಯಲ್ಲಿ "ಸಾಕಷ್ಟು ಹಣ" ಇರುವುದಿಲ್ಲವೆಂತ ಸದರಿ ದಿನಾಂಕ 03-03-2025 ರಂದು ಮೇಮೋದೊಂದಿಗೆ ವಾಪಸ್ಸ ಬಂದಿರುತ್ತದೆ.

ನಂತರ ಫಿರ್ಯಾದಿದಾರರು ದಿನಾಂಕಃ 10-03-2025 ರಂದು ತಮ್ಮ ವಕೀಲರ ಮೂಲಕ ನೋಟಸ್‌ನ್ನು ನಿಮಗೆ ನೀಡಿದ್ದು, ಸದ್ರಿ ನೋಟಿಸ್ ನಿಮಗೆ ಜ್ಯಾರಿಯಾಗಿದ್ದರೂ ಸಹಿತ ಚೆಕ್ಕನ ರಕಂನ್ನು ವಾಪಸ್ಸು ಮಾಡಿರುವುದಿಲ್ಲ ಆ ಮೂಲಕ ನೆಗೋಶಿಯೇಬಲ್ ಇನ್‌ಸ್ಟ್ರುಮೆಂಟ ಆಕ್ಟ ಕಲಂ 138 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವೆಸಗಿದ್ದೀರಿ ಎಂದು ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಪ್ರಶ್ನೆ – ನಿಮ್ಮ ಮೇಲೆ ಹೊರಿಸಲಾದ ಆಪಾದನೆ ಕೇಳಿದ್ದೀರಾ? ಅದು ನಿಮಗೆ ತಿಳಿಯಿತೇ?

ಉತ್ತರ –

ಪ್ರಶ್ನೆ – ನೀವು ಸದ್ರಿ ಆಪಾದನೆಯನ್ನು ಒಪ್ಪಿಕೊಳ್ಳುತ್ತೀರಾ? ಅಥವಾ ನಿಮ್ಮ ವಿರುದ್ಧ ವಿಚಾರಣೆ ನಡೆಯಬೇಕೇ?

ಉತ್ತರ –

(ಮೇಲಿನ ಆಪಾದನೆಯನ್ನು ಆಪಾದಿತನಿಗೆ ತಿಳಿದಿರುವ ಭಾಷೆಯಲ್ಲಿ ಓದಿ, ತಿಳಿಸಿ ಹೇಳಿ ಅವರು ನೀಡಿದ ಉತ್ತರವನ್ನು ಯಥಾರೀತಿ ಬರೆದುಕೊಂಡಿರುವುದಾಗಿ ಈ ಮೂಲಕ ದೃಢೀಕರಿಸಲಾಗಿದೆ.)

ದಿಃ 28-10-2025

ಸಿವಿಲ್ ಜಡ್ಜ್ ಮತ್ತು ಪ್ರ. ದ. ನ್ಯಾಯಿಕ ದಂಡಾಧಿಕಾರಿಗಳು,
ಮುಂಡಗೋಡ